DITTO WS

Reg. No. : ...................................

Name : ......................................

**SY-06**

# SECOND YEAR HIGHER SECONDARY EXAMINATION, MARCH 2020

Part – II

**KANNADA**

Maximum : 80 Scores

Time : 2½ Hours

Cool-off time : 15 Minutes

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ 15 ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ನೀಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳನ್ನು ಸಿದ್ಧಪಡಿಸಲು ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ)** **(4 × 1 = 4)**

1. 'ಶ್ರೀನಿವಾಸ' ಎಂಬುದು ಯಾರ ಕಾವ್ಯನಾಮವಾಗಿದೆ ?

   (ಯು.ಆರ್. ಅನಂತಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜಿ.ಎಸ್. ಶಿವರುದ್ರಪ್ಪ)

2. 'ಕೆರೆಯ ದಡದಲ್ಲಿ' ಎಂಬ ಪಾಠವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?

   (ಚಿದಂಬರ ರಹಸ್ಯ, ನಿಗೂಢ ಮನುಷ್ಯರು, ಅಬಚೂರಿನ ಪೋಸ್ಟಾಫೀಸು, ಪರಿಸರದ ಕಥೆ)

3. ಮನೆಬಿಟ್ಟು ಹೊರಟು ಹೋದ ಅಬ್ಬಕ್ಕಳ ಮಗನ ಹೆಸರೇನು ?

(ಚೆಲುವ, ವೆಂಕಟರಮಣ, ಬಸವ, ಶೀನು)

4. ಆಗದು ಎಂದು ... ಚಲನಚಿತ್ರ ಗೀತೆಯನ್ನು ಬರೆದವರು ಯಾರು ?

(ಗಿರೀಶ್ ಕಾಸರವಳ್ಳಿ, ಸುನಿಲ್ ಕುಮಾರ್ ದೇಸಾಯಿ, ಆರ್.ಎನ್. ಜಯಗೋಪಾಲ್, ಪುಟ್ಟಣ್ಣ ಕಣಗಾಲ್)

**(5 ರಿಂದ 10 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ)** **(6 × 1 = 6)**

5. ಸಂತೋಷ, ವನ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ.

6. ನುಡಿಯು – ಈ ಪದದ ಎರಡು ನಿಷೇದಾರ್ಥ ರೂಪವನ್ನು ಬರೆಯಿರಿ.

7. ಸೂರು, ಪಲ್ಲವ – ಈ ಪದಗಳಿಗೆ ಅರ್ಥವನ್ನು ಕೊಡಿರಿ.

8. ವಿಲಸಿತಾರಾಮ – ಈ ಪದವನ್ನು ವಿಂಗಡಿಸಿ ಬರೆಯಿರಿ.

9. ಭೂಮಿ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಕೊಡಿರಿ.

10. ಸೆರಗೊಡ್ಡಿಬೇಡು – ಈ ನುಡಿಗಟ್ಟನ್ನು ಬಳಸಿಕೊಂಡು ಅರ್ಥಪೂರ್ಣವಾದ ವಾಕ್ಯವೊಂದನ್ನು ರಚಿಸಿರಿ.

**(11 ರಿಂದ 14ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4 × 2 = 8)**

11. ಕೆಳಗಿನ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ವಿಭಜಿಸಿ ಬರೆಯಿರಿ.

ಪ್ರವಾಹದ ನೀರು ಇಳಿಯತೊಡಗಿದಾಗ ಚೆನ್ನಪರಯನು ನಾಯಿಯನ್ನು ಹುಡುಕುತ್ತಾ ಬಂದನು.

12. ಕೆಳಗಿನ ವಾಕ್ಯದಲ್ಲಿರುವ ಅಕ್ಷರತಪ್ಪುಗಳನ್ನು ಸರಿಪಡಿಸಿ ಪುನಃ ಬರೆಯಿರಿ.

ಚಲನಚಿತ್ರ ತಯರಿಗೆ ದೊಡ ಮೊತ್ತದ ಬಂಡವಳದ ಅಗತವಿದೆಯೆನ್ನಬಹುದು.

13. 'ಹಾ ಹಂತ ! ಇದನಿಂತು ಮರೆಯಬಹುದೆ ಮಹಾಂತ' – ಈ ಸಾಲಿನ ಸ್ವಾರಸ್ಯವನ್ನು ಬರೆಯಿರಿ.

14. ಕನ್ನಡ ನಾಡಿನ ವನದಲ್ಲಿ ಶೋಭಿಸುವ ಸಮೃದ್ಧ ಫಲಗಳಾವುವು ?

DITTO WS

**(15 ರಿಂದ 19ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 4 (ನಾಲ್ಕು) ಪ್ರಶ್ನೆಗಳಿಗೆ ಅರ್ಧಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(4 × 4 = 16)**

15. 'ಕೆರೆಯ ದಡದಲ್ಲಿ' ಪಾಠಭಾಗದಲ್ಲಿ ಮೂಡಿಬಂದಿರುವ ಯಾವುದಾದರೂ ಒಂದು ಜೀವಿಯ ರಕ್ಷಣಾ ತಂತ್ರವನ್ನು ವಿಶದಪಡಿಸಿರಿ.

16. 'ಒಲೆಯುರಿಸುವುದೆಂದರೆ ಅಪ್ಪನ ಪಾಲಿಗೆ ತಪಸ್ಸೇ ಸರಿ' ಎಂದು ಕವಯಿತ್ರಿ ಹೇಳಲು ಕಾರಣವಾದ ಅಂಶಗಳ ಕುರಿತು ಕಿರುಟಿಪ್ಪಣಿ ಬರೆಯಿರಿ.

17. 'ಜಾಲಿಯ ಮರದಂತೆ' ಕೀರ್ತನೆಯಲ್ಲಿ ದುರ್ಜನರ ಪ್ರವೃತ್ತಿಯನ್ನು ವಿಡಂಬಿಸಿರುವ ಬಗೆಯನ್ನು ತಿಳಿಸಿರಿ.

18. ಕೆಳಗಿನ ಪದ್ಯಭಾಗದ ಸಾಲಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸನ್ನು ಹೆಸರಿಸಿರಿ.

    ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ.

19. ಬೆಂಗಳೂರಿನ ಸಂಸ್ಥೆಯೊಂದು ಆಸಕ್ತರಿಗೆ ನಟನೆಯ ಬಗ್ಗೆ ತರಬೇತಿ ನೀಡುತ್ತಿದೆ ಎಂಬ ವಾರ್ತೆಯನ್ನು ಪತ್ರಿಕೆಯಲ್ಲಿ ಓದಿರುವಿರಿ. ನಿಮಗೆ ಆ ಸಂಸ್ಥೆಯಲ್ಲಿ ತರಬೇತಿಗೆ ಸೇರಲು ಆಸಕ್ತಿಯಿದೆ ಎಂದು ಭಾವಿಸಿಕೊಳ್ಳಿ. ಸಂಸ್ಥೆಯ ಮುಖ್ಯಸ್ಥರಿಗೆ ಈ ಕುರಿತು ಪತ್ರವೊಂದನ್ನು ಬರೆಯಿರಿ.

**(20 ರಿಂದ 27 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 6 (ಐದು) ಪ್ರಶ್ನೆಗಳಿಗೆ ಒಂದು ಪುಟಕ್ಕೆ ಮೀರದಂತೆ ಉತ್ತರಿಸಿರಿ)** **(6 × 5 = 30)**

20. ತನ್ನಿಂದ ದೂರವಾದ ಮಗನನ್ನು ನೆನೆದು ದುಃಖಿಸುವ ಹೆತ್ತ ತಾಯಿಯೊಬ್ಬಳ ನೋವು 'ತಾಯಿ' ಕಥೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

21. ಸತತ ಪ್ರಯತ್ನದಿಂದ ಮಾತ್ರ ಉನ್ನತ ಯಶಸ್ಸು ಸಾಧ್ಯ ಎಂಬುದನ್ನು ಮೇರಿ ಕ್ಯೂರಿಯ ಸಾಧನೆಯ ಹಿನ್ನೆಲೆಯಲ್ಲಿ ವಿವರಿಸಿರಿ.

22. ಶೋಷಿತ ವರ್ಗದ ಪ್ರತಿಭಟನೆಯ ಸ್ವರೂಪ 'ಸಾವಿರಾರು ನದಿಗಳು' ಕವನದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

23. 'ವೃದ್ಧ ಮಾತಾಪಿತರನ್ನುಕಡೆಗಣಿಸುತ್ತಿರುವ ಇಂದಿನ ತಲೆಮಾರು' ಈ ವಿಷಯವನ್ನು 'ಅವರವರ ದಾರಿ' ಕವನದ ಆಶಯಕ್ಕೆ ಸರಿಹೊಂದಿಸಿ ಸೂಕ್ತವಾದ ಲೇಖನವೊಂದನ್ನು ಸಿದ್ಧಪಡಿಸಿರಿ.

24. 'ನಡೆವುದೊಂದೇ ಭೂಮಿ' ಪಾಠದಲ್ಲಿ ಅನ್ನದ ಮಹತ್ವವನ್ನು ತಿಳಿಸಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಆಹಾರದ ಅಭಾವ ಇಂದಿಗೂ ಇದೆ. 'ಆಹಾರದ ಅಭಾವಕ್ಕಿರುವ ಕಾರಣಗಳು ಹಾಗೂ ಪರಿಹಾರೋಪಾಯಗಳು' – ಈ ವಿಷಯದ ಕುರಿತು ಪ್ರಬಂಧವೊಂದನ್ನು ತಯಾರಿಸಿರಿ.

25. ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಣ್ಣ ಕಥೆಯು ಸಿದ್ಧಲಿಂಗಯ್ಯನವರ ನಿರ್ದೇಶನದಲ್ಲಿ 'ಬೂತಯ್ಯನ ಮಗ ಅಯ್ಯು' ಎಂಬ ಅತ್ಯುತ್ತಮ ಚಲನಚಿತ್ರವಾಗಿ ಮೂಡಿಬಂದ ಬಗೆಯನ್ನು ವಿವರಿಸಿರಿ.

26. 'ಗುರುವಚನಮಲಂಘನೀಯಂ' ಕಾವ್ಯಭಾಗದಲ್ಲಿ ಚಿತ್ರಿತವಾದ ದುರ್ಯೋಧನನ ಪಾತ್ರ ಚಿತ್ರಣ ಮಾಡಿರಿ.

27. ಸಿನೆಮಾ ನಿರ್ಮಾಣದಲ್ಲಿನ ಪ್ರಮುಖ ಹಂತಗಳನ್ನು ವಿವರಿಸಿ ಬರೆಯಿರಿ.

**(28 ರಿಂದ 30 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 02 (ಎರಡು) ಪ್ರಶ್ನೆಗಳಿಗೆ ಒಂದೂವರೆ ಪುಟಗಳಿಗೆ ಕಡಿಮೆಯಾಗದಂತೆ ಉತ್ತರಿಸಿರಿ) (2 × 8 = 16)**

28. ಸಂಸಾರ ಬಂಧನದಿಂದ ಬಿಡಿಸಿಕೊಳ್ಳಬೇಕೆಂದು ಬಯಸಿದರೂ ಸಾಧ್ಯವಾಗದೆ ಇರುವ ಸುಬ್ಬಣ್ಣನವರ ದ್ವಂದ್ವ ವ್ಯಕ್ತಿತ್ವದ ಕುರಿತು ವಿವರಿಸಿ ಬರೆಯಿರಿ.

29. 'ನೆರೆ' ಕಥೆಯಲ್ಲಿ ನಾಯಿಯ ಸ್ವಾಮಿನಿಷ್ಠೆ ಹಾಗೂ ಮನುಷ್ಯರ ಕೃತಘ್ನ ಮನೋಭಾವಗಳು ಪ್ರಕಟವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

30. 'ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು' ಕಾವ್ಯಭಾಗದ ಆಶಯವನ್ನು ವಿವರಿಸಿ ಬರೆಯಿರಿ.

---